ಶ್ರೀ ಚಿಕ್ಕನಗೌಡರ ಸಿದ್ದನಗೌಡರ ಈಶ್ವರಗೌಡ: ವಿವರ ಕೊಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಕೊಡಿ. ಆಮೇಲೆ ಇದರಲ್ಲಿ ವರಮಾನ ಸರ್ಕಾರಕ್ಕೆ ಸೋರಿಹೋಗತಕ್ಕಂಥದ್ದು ಏನಾದರೂ ಆಗಿದ್ದರೆ ಅದರ ಬಗ್ಗೆ ನಮ್ಮ ಅಧಿಕಾರಿಗಳನ್ನು ಕಳುಹಿಸಿ ಮತ್ತೆ ಇದರಲ್ಲಿ ಇನ್ನೂ ಏನಾದರೂ ತಪ್ಪಿದ್ದರೆ ಅದನ್ನು ಸರಿಪಡಿಸತಕ್ಕಂಥದ್ದು ಅಥವಾ ಹೆಚ್ಚಿನ ಮಾಹಿತಿ ಏನಾದರೂ ಬೇಕಾದರೆ ಅದನ್ನೂ ಕೂಡ ಒದಗಿಸಿಕೊಡುತ್ತೇವೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3512

ಸದಸ್ಯರ ಹೆಸರು : ಶ್ರೀ ಹೆಚ್.ಆರ್.ಗವಿಯಪ್ಪ(ಹೊಸಪೇಟೆ)

ಉತ್ತರಿಸುವ ಸಚಿವರು : ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

<table>
<tr><th>ಕ್ರ.ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ.</td><td>ತುಂಗಭದ್ರಾ ಅಣೆಕಟ್ಟು ನಿರ್ಮಾಣಗೊಂಡ ನಂತರ ಕರ್ನಾಟಕ ಹಾಗೂ ಆಂಧ್ರ ರಾಜ್ಯಗಳಿಗೆ ಎಷ್ಟೆಷ್ಟು ನೀರು ಸರಬರಾಜು ಮಾಡಬೇಕೆಂದು ಒಪ್ಪಂದವಾಗಿರುವುದು;
(ವಿವರವಾದ ಮಾಹಿತಿಯನ್ನು ಒದಗಿಸುವುದು)?</td><td>ಬಚಾವತ್ ಆಯೋಗದ ಐತೀರ್ಪಿನ ಪ್ರಕಾರ ಕರ್ನಾಟಕ ಮತ್ತು ಆಂಧ್ರ ಪ್ರದೇಶ ರಾಜ್ಯಗಳಿಗೆ ಹಂಚಿಕೆಯಾಗಿ ರುವ ನೀರಿನ ಪ್ರಮಾಣದ ವಿವರಗಳು ಕೆಳಕಂಡಂತಿದೆ:-
(ಟಿ.ಎಂ.ಸಿ.ಗಳಲ್ಲಿ)
<table>
<tr><th>ರಾಜ್ಯ</th><th>ಒಟ್ಟು ಹಂಚಿಕೆ</th><th>ಆವಿಯಿಂದ ನಷ್ಟವಾಗುವ ನೀರಿನ ಪ್ರಮಾಣ</th><th>ನಿವ್ವಳ ಹಂಚಿಕೆ</th></tr>
<tr><td>ಕರ್ನಾಟಕ</td><td>151.49</td><td>12.50</td><td>138.99</td></tr>
<tr><td>ಆಂಧ್ರಪ್ರದೇಶ</td><td>78.51</td><td>5.50</td><td>73.07</td></tr>
<tr><td>ಒಟ್ಟು</td><td>230.00</td><td>18.00</td><td>212.00</td></tr>
</table>
</td></tr>
</table>

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಆ	ತುಂಗಭದ್ರಾ ಅಣೆಕಟ್ಟಿನಿಂದ ಉಪ ಕಾಲುವೆಗಳಿಗೆ ಎಷ್ಟೆಷ್ಟು ನೀರು ಪೂರೈಕೆಯಾಗುತ್ತಿದೆ?	ಬಜಾವತ್ ಐತೀರ್ಪಿನನ್ವಯ ಹಾಗೂ ಪ್ರತಿ ವರ್ಷ ತುಂಗಭದ್ರಾ ಜಲಾಶಯದಲ್ಲಿ ಸಂಗ್ರಹವಾಗುವ ನೀರಿನ ಪ್ರಮಾಣವನ್ನು ಆದರಿಸಿ ತುಂಗಭದ್ರಾ ಅಣೆಯಕಟ್ಟೆ ಉಪ ಕಾಲುವೆಗಳಿಗೆ ನೀರನ್ನು ಪೂರೈಕೆ ಮಾಡಲಾಗುತ್ತಿದೆ.
ಇ.	500 ವರ್ಷಗಳ ಹಳೆಯ ವಿಜಯನಗರದ ಉಪ ಕಾಲುವೆಗಳಾದ, ರಾಯಕಾಲುವೆ, ಬಸವಣ್ಣ ಕಾಲುವೆ, ಬೆಲ್ಲ ಕಾಲುವೆ ಮತ್ತು ನಂ.10 ಮುದ್ದಾಪುರ ಕಾಲುವೆಗಳ ದುರಸ್ತಿಗಾಗಿ ಸರ್ಕಾರ ಕೈಗೊಂಡ ಕ್ರಮವೇನು?	ಆಯವ್ಯಯದಲ್ಲಿ ಒದಗಿಸಲಾದ ಅನುದಾನದ ಮೊತ್ತವನ್ನು ಆಧರಿಸಿ ಅಗತ್ಯವಿರುವ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಅದಲ್ಲದೇ ವಿಜಯನಗರ ಕಾಲುವೆಗಳ ಆಧುನೀಕರಣ ಕಾಮಗಾರಿಗಳಿಗಾಗಿ ರೂ.98.48 ಕೋಟಿ ಮೊತ್ತದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.
ಈ.	ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?	ಪ್ರಶ್ನೆ 'ಇ'ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರಶ್ನೆ ಸಂಖ್ಯೆ 3512
(ಉತ್ತರ ಲಗತ್ತಿಸಿದೆ)

ಶ್ರೀ ಹೆಚ್.ಆರ್.ಗವಿಯಪ್ಪ: ಮಾನ್ಯ ಅಧ್ಯಕ್ಷರೇ, ನಮ್ಮ ವಿಜಯನಗರ ಕೆನಾಲ್ಸ್ ವಾಟರ್ ವರ್ಕ್ಸ್ ಬಗ್ಗೆ repair works what has been done? ಇದರ ಬಗ್ಗೆ ಬಹಳ ನೆಗ್ಲೆಕ್ಟ್ ಮಾಡಲಾಗಿದೆ. ಕಳೆದ 50 ವರ್ಷಗಳಿಂದ ಸರಿಯಾದ ಕೆಲಸವಾಗಿಲ್ಲ. ಬೀಲ್ ಎಂಡರ್ಸ್‌ಗೆ ನೀರು ತಲುಪುತ್ತಿಲ್ಲ. ಈ ಕೆಲಸವನ್ನು ಬೇಗ ತೆಗೆದುಕೊಳ್ಳಬೇಕೆಂದು ನಾನು ಬಯಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಿಜ. ಈ ತುಂಗಭದ್ರಾ ಅಣೆಕಟ್ಟಿನಿಂದ ಈ ಉಪ ಕಾಲುವೆಗಳು ಏನಿವೆ ಅದರಲ್ಲೂ ವಿಶೇಷವಾಗಿ ವಿಜಯನಗರ ಕಾಲುವೆ ನಮ್ಮ ಮುದ್ದಾಪುರ ಕಾಲುವೆ ಅದೇ ರೀತಿಯಾಗಿ ರಾಯ ಕಾಲುವೆ, ಬಸವಣ್ಣ

ಕಾಲುವೆ ಇವುಗಳಿಗೆ ಹೆಚ್ಚಿಗೆ ಹಣ ಇಟ್ಟು ಪೂರ್ತಿ ಮಾಡತಕ್ಕಂಥ ಕೆಲಸವಾಗಬೇಕು. ಇವೆಲ್ಲಾ ಅತ್ಯಂತ ಹಳೆಯ ಕಾಲುವೆಗಳು. ಇದಕ್ಕೆ ದುರಸ್ತಿ ಮಾಡುವ ಅವಶ್ಯಕತೆ ಇದೆ. ಅದಕ್ಕಾಗಿ ಈ ಬಾರಿ ಹೆಚ್ಚಿನ ಗಣ ಕೊಡತಕ್ಕಂಥದ್ದರ ಬಗ್ಗೆ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ. ಇದರ ಜೊತೆಗೆ ಈ ಸಾರಿ ಮೇನ್ ಕೆನಾಲ್‌ಗೆ ಸುಮಾರು 17 ಕೋಟಿ ರೂಪಾಯಿ ಗಳನ್ನು ನಾವು ಇಟ್ಟಿದ್ದೇವೆ. ಈ ಹಿಂದೆ ಅದಕ್ಕೆ ಹಣವನ್ನು ಇಡುತ್ತಿರಲಿಲ್ಲ. ಈ ಬಾರಿ 17 ಕೋಟಿ ರೂಪಾಯಿಗಳನ್ನು ವಿಶೇಷವಾಗಿ ನಾವು ಇದಕ್ಕಾಗಿ ಇರಿಸಿದ್ದೇವೆ. ಆಮೇಲೆ ವಿತರಣಾ ಕಾಲುವೆಗೂ ಕೂಡ ಈ ಬಾರಿ 10 ಕೋಟಿ ರೂಪಾಯಿಗಳನ್ನು ನಾವು ಇರಿಸಿದ್ದೇವೆ. ಅದರಲ್ಲಿ ತಾವು ಕೇಳತಕ್ಕಂಥ ಕಾಲುವೆಗೆ ಸುಮಾರು ನಾಲ್ಕು ಕೋಟಿ ರೂಪಾಯಿಗಳನ್ನು ಈ ಬಾರಿ ಒದಗಿಸಿದ್ದೇವೆ. ಬಹುಶಃ ಈ ಹಣವನ್ನು ಖರ್ಚು ಮಾಡಿ ನಾವು ಆದಷ್ಟು ಬೇಗನೆ ಈ ಕೆಲಸವನ್ನು ತೆಗೆದುಕೊಳ್ಳುತ್ತೇವೆ. ಇದಲ್ಲದೇ ಒಂದು ಮಾಸ್ಟರ್‌ಪ್ಲಾನ್ ತಯಾರು ಮಾಡಿ ಸುಮಾರು 98 ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಿದ್ದೇವೆ. ಆ 98 ಕೋಟಿ ರೂಪಾಯಿಗಳ ಯೋಜನೆಗೆ ಮಂಜೂರಾತಿ ಸಿಕ್ಕರೆ ಖಂಡಿತವಾಗಿ ಇಡೀ ಸಮಸ್ಯೆಯೇ ಬಗೆಹರಿಯುತ್ತಿದೆ. ಅದಕ್ಕೆ ನಮ್ಮ ಪ್ರಯತ್ನ ನಡೆದಿದೆ. ಅದನ್ನು ಈಗಾಗಲೇ ನಾವು ಆರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ. ಅಲ್ಲಿಂದ ಒಪ್ಪಿಗೆ ಬಂದ ಮೇಲೆ ಈ ನಮ್ಮ ಕೆ.ಎನ್.ಎನ್. ಮುಖಾಂತರವಾಗಲಿ ಅಥವಾ ಬೇರೆ ಫೈನಾನ್ಸ್ ಇನ್‌ಸ್ಟ್ಯೂಶನ್‌ನಿಂದ ಏನಾದರೂ ಹಣವನ್ನು ತೆಗೆದುಕೊಂಡು ಇದನ್ನು ಖಂಡಿತವಾಗಿ ಪಕ್ಕಾ ಕೆಲಸ ಮಾಡಿಸತಕ್ಕಂಥ ಕಾರ್ಯವನ್ನು ಮಾಡುತ್ತೇವೆ.

ಶ್ರೀ ಹೆಚ್.ಆರ್.ಗವಿಯಪ್ಪ: ಮಾನ್ಯ ಅಧ್ಯಕ್ಷರೆ ಆದಷ್ಟು ಬೇಗನೇ ತೆಗೆದುಕೊಳ್ಳ ಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನದು ಇನ್ನೊಂದು ಪ್ರಶ್ನೆ ಇದೆ. ನಮ್ಮ ವಿಜಯನಗರ ಕೆನಾಲ್ ಸ್ಟೇಟ್ ಕೆನಾಲ್ ಆಗಿದೆ. ಆದರೆ it has been handed over to the tunga bhadra boards, which is an inter state board ಅದನ್ನು ನಮ್ಮ ಸ್ಟೇಟ್ ವ್ಯಾಪ್ತಿಯಲ್ಲಿಯೇ ಇಟ್ಟುಕೊಳ್ಳಬೇಕೆಂದು ನಮ್ಮ ಕೆನಾಲ್ ನಮ್ಮ ಸ್ಟೇಟ್‌ನಲ್ಲಿಯೇ ಬರಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗಾಗಲೇ ಇಂಟರ್‌ಸ್ಟೇಟ್ ಬೋರ್ಡ್‌ನಲ್ಲಿ ಈ ಬಗ್ಗೆ ಸಮಸ್ಯೆಗಳಿವೆ. ಅದನ್ನು ಈಗ ಒಂದೊಂದಾಗಿ ಬಿಡಿಸಿ ಹೇಳುವುದಕ್ಕೆ ಸಾಧ್ಯವಿಲ್ಲ. ಅದನ್ನು ನಾನು ನೋಡುತ್ತೇನೆ. ಅದನ್ನು ನಾನು ಎಕ್ಸಾಮಿನ್ ಮಾಡಿ ನೋಡುತ್ತೇನೆ. ಆದರೆ ಒಟ್ಟಾರೆ ನಿಮಗೆ ಬೇಕಾದುದು ಆ ಕಾಲುವೆ ದುರಸ್ಥಿ.

ಅದಕ್ಕಾಗಿ ಈಗಾಗಲೇ ನಾಲ್ಕು ಕೋಟಿ ರೂಪಾಯಿಗಳ ಹಣವನ್ನು ಇಟ್ಟಿದ್ದೇವೆ. ಸಂಪೂರ್ಣವಾಗಿ ರಿಪೇರಿಗೂ 98 ಕೋಟಿ ರೂಪಾಯಿಗಳನ್ನು ಇಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಅದಕ್ಕೆ ಈಗ ಅದು ಇಂಟರ್‌ಸ್ಟೇಟ್ ಬೋರ್ಡ್‌ಗೆ ತಪ್ಪಿಸುವುದಕ್ಕೆ ತಕ್ಷಣ ಅರ್ಡರ್ ಆಗಬೇಕು. ಅದನ್ನು ಯಾವ ರೀತಿಯಾಗಿ ಮಾಡಬೇಕು ಎಂಬುದರ ಬಗ್ಗೆ ಯೋಚನೆ ಮಾಡುತ್ತೇವೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2381

ಸದಸ್ಯರ ಹೆಸರು : ಶ್ರೀ ರಾಜೇಂದ್ರ ವರ್ಮ (ಹುಲಸೂರು)

ಉತ್ತರಿಸುವ ಸಚಿವರು : ಶ್ರೀ ಮಲ್ಲಿಕಾರ್ಜುನ ಖರ್ಗೆ
(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
1.	ಕಾರಂಜಾ ಯೋಜನೆಯು ಡಾಕುಳಗಿ ಮತ್ತು ಹಿಲಾಲಪುರ ಮಧ್ಯದಲ್ಲಿ ಏತ ನೀರಾವರಿ ಯೋಜನೆಯನ್ನು ಎಂದು ಪ್ರಾರಂಭ ಮಾಡಲಾಗುವುದು.	ಕಾರಂಜಾ ಯೋಜನೆಯ ಹಿನ್ನೀರಿನ ಎಡ ದಂಡೆಯಲ್ಲಿ ಡಾಕುಳಗಿ ಮತ್ತು ಹಿಲಾಲಪುರ ಮಧ್ಯದಲ್ಲಿ ಅತವಾಳ ಬಳಿ ಏತ ನೀರಾವರಿ ಯೋಜನೆ ಅಂದಾಜಿಗೆ ಸರ್ಕಾರದ ಮಟ್ಟ ದಲ್ಲಿ ವಿವಿಧ ಇಲಾಖೆಗಳಲ್ಲಿ ಮಂಜೂರಾತಿ ನೀಡುವ ಪೂರ್ವವಾಗಿ ಪರಿಶೀಲನೆಯಲ್ಲಿದೆ.
2.	ಈ ಕಾಮಗಾರಿಗೆ ಅಂದಾಜು ಎಷ್ಟು ಹಣ ಖರ್ಚಾಗುತ್ತದೆ:	ಈ ಯೋಜನೆಗೆ ರೂ.18.09 ಕೋಟಿಗಳ ಅಂದಾಜು ತಯಾರಿಸಿದ್ದು ಇದು ಪರಿ ಶೀಲನೆಯ ಹಂತದಲ್ಲಿದೆ.
3.	ಈ ಸಾಲಿನಲ್ಲಿ ಈ ಯೋಜನೆಗೆ ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗಿದೆ.	ಕಾರಂಜಾ ಯೋಜನೆಗೆ ಎ.ಐ.ಬಿ.ಪಿ. ರಡಿ ಯಲ್ಲಿ ಕೇಂದ್ರ ಸಾಲ ಬಿಡುಗಡೆಯಾಗಿರುವ ಮೊತ್ತದಲ್ಲಿ ಕಾರಂಜಾ ಯೋಜನೆಯ ಎಲ್ಲಾ ಕಾಮಗಾರಿಗಳನ್ನು ಜೂನ್ 2005ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಿದ್ದು ಈ ಯೋಜನೆಗೆ ಬಿಡುಗಡೆಯಾಗಿರುವ ಎ.ಐ.